# ರಾಸ

# ರಸಯಾನದ ಶಾಸ್ತ್ರಜೀವಿ



**ಸಂಗೀತ ಕಲಾನಿಧಿ, ಕರ್ನಾಟಕ ಶಾಸ್ತ್ರೀಯ ಸಂಗೀತದ ಬಹುಶ್ರುತ ವಿದ್ವಾಂಸ, ಸಂಪನ್ಮೂಲ ವ್ಯಕ್ತಿ ಮೈಸೂರಿನ ರಾ. ಸತ್ಯನಾರಾಯಣ ಅವರದ್ದು ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ. ಸಂಗೀತಶಾಸ್ತ್ರದ ಹತ್ತು ಹಲವು ಕೃತಿಗಳನ್ನು ಸಂಪಾದಿಸಿ, ಅನುವಾದಿಸಿ ಸಂಗೀತಲೋಕಕ್ಕೆ ಜ್ಞಾನದಾಸೋಹ ಮಾಡಿದ ಈ ಅಮೂಲ್ಯ ಸಂಗೀತ ರತ್ನ ಇನ್ನು ನೆನಪು ಮಾತ್ರ.**

■ ಎಸ್. ಸೂರ್ಯಪ್ರಕಾಶ ಪಂಡಿತ್

‘ಸಂಗೀತವು ಕೇವಲ ಕೇಳಿ ಆನಂದಿಸಬೇಕಾದ ಕಲೆ, ಶಾಸ್ತ್ರವು ಕೇವಲ ಗ್ರಂಥಸ್ಥವಾದ, ಲಕ್ಷ್ಯವಿಧುರವಾದ ನಿಯಮಗಳ ಗೊಂದಲ; ಪ್ರಾಚೀನ ಸಂಗೀತಶಾಸ್ತ್ರಗಳು ಗತಕಾಲದ ಕತ್ತಲೆಯ ಗುಹೆಯಿಂದ ಅಗೆದು ತಂದ, ಪ್ರಾಚ್ಯ ವಸ್ತು ಪ್ರದರ್ಶನಕ್ಕೆ ಮಾತ್ರ ಯೋಗ್ಯವಾದ ವಸ್ತುಗಳು ಎಂದು ಮುಂತಾಗಿ ಭಾವನೆ ತಳೆದವರಿಗೆ ಈ ಗ್ರಂಥದಲ್ಲಿ ರುಚಿಯೂ ಪ್ರಯೋಜನವೂ ಇರವು. ಸಂಗೀತದಲ್ಲಿಯೂ ಅದರ ಶಾಸ್ತ್ರದಲ್ಲಿಯೂ ಅವುಗಳನ್ನು ಮೀರಿದ, ಮಾನವಕೋಟಿಯ ಮುನ್ನಡೆಯಲ್ಲಿರುವ, ಮಹತ್ತಾದ ಇನ್ನೇನೋ ಇದೆ; ಅದನ್ನು ಅವುಗಳ ಮೂಲಕ ಅರಸುವ ಪ್ರಯತ್ನವನ್ನೂ ಮಾಡಬೇಕು ಎಂದು ನಾನು ನಮ್ರವಾಗಿ ನಂಬಿದ್ದೇನೆ’.

ಈ ಪ್ರತಿಜ್ಞಾವಾಕ್ಯದಂತೆ ಜೀವನದುದ್ದಕ್ಕೂ ಸಂಗೀತ ಶಾಸ್ತ್ರದೀಕ್ಷೆಯಲ್ಲಿ ನಿರತರಾಗಿ ಸಾರ್ಥಕತೆಯನ್ನು ಕಂಡುಕೊಂಡವರು ಮಹಾ ಮಹೋಪಾಧ್ಯಾಯ ರಾ. ಸತ್ಯನಾರಾಯಣ. ಸಂಗೀತಶಾಸ್ತ್ರ ಪರಂಪರೆಗೆ ಅವರಷ್ಟು ಕೊಡುಗೆಯನ್ನು ನೀಡಿದವರು ಮತ್ತೊಬ್ಬರು ಇರಲಾರರು, ಅವರ ಬರಹಗಳ ಗಾತ್ರ ಸುಮಾರು ಇಪ್ಪತ್ತು ಸಾವಿರ ಪುಟಗಳನ್ನು ಮೀರುತ್ತವೆ. ಕೇವಲ ಗಾತ್ರದಿಂದಷ್ಟೇ ಅಲ್ಲ, ಗುಣದಿಂದಲೂ ಶಾಸ್ತ್ರಪರಂಪರೆಯನ್ನು ಶ್ರೀಮಂತಗೊಳಿಸಿದವರು ಅವರು. ಓದಿದ್ದು ರಸಾಯನಶಾಸ್ತ್ರವನ್ನು; ಆದರೆ ಅವರು ಒಲಿದು ಆರಿಸಿಕೊಂಡಿದ್ದು ಸಂಗೀತ–ನೃತ್ಯಕಲೆಗಳ ರಸಶಾಸ್ತ್ರವನ್ನು. ಸಂಗೀತಶಾಸ್ತ್ರ ಪರಂಪರೆಯಲ್ಲಿ ಸಾಧನೆಗೆ ತೊಡಗುವವರ ಸಂಖ್ಯೆ ಅಂದೂ ವಿರಳವೇ, ಇಂದೂ ವಿರಳವೇ; ಈ ವಿರಳ ಮಾರ್ಗದಲ್ಲಿ ವಿದ್ಯುತ್ ಸಲಗದಂತೆ ಸಂಚರಿಸಿ, ತಮ್ಮದಾದ ಶಾಸ್ತ್ರಪಥವನ್ನು ನಿರ್ಮಿಸಿಕೊಂಡು ಕರ್ನಾಟಕ ಶಾಸ್ತ್ರೀಯ ಸಂಗೀತಪ್ರಪಂಚದಲ್ಲಿ ಶಾಶ್ವತ ಕೀರ್ತಿಯನ್ನು ಸಂಪಾದಿಸಿಕೊಂಡವರು ರಾ. ಸತ್ಯನಾರಾಯಣ, ಅವರ ಶಿಷ್ಯರಿಂದಲೂ ಅಭಿಮಾನಿಗಳಿಂದಲೂ ಆತ್ಮೀಯವಾಗಿ ‘ರಾಸ’ ಎಂದು ಕರೆಸಿಕೊಂಡವರು.